## ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಮರಿತಿಬ್ಬೇಗೌಡ ಇವರು ಶೂನ್ಯವೇಳೆಯಲ್ಲಿ ಪ್ರಸ್ತಾಪಿಸಿರುವ ವಿಷಯ / ಪ್ರಶ್ನೆಗೆ ಉತ್ತರ

**ವಿಷಯ:-** ಮಂಡ್ಯ ಕ್ಯಾನ್ಸರ್ ಆಸ್ಪತ್ರೆಯಲ್ಲಿ ರೇಡಿಯೋಥೆರಪಿಸ್ಟ್‌ಗಳ ಕೊರತೆ , ಉಪಕರಣಗಳು ದುರಸ್ತಿಯಾಗದೆ ಇದ್ದು, ಕಟ್ಟಡ ಕಾಮಗಾರಿಯು ಅಪೂರ್ಣವಾಗಿದ್ದು, ಅತೀವ ಮೂಲಭೂತ ಸೌಲಭ್ಯಗಳ ಕೊರತೆಯಿಂದ ಕಳೆದ ಒಂದೂವರೆ ವರ್ಷಗಳಿಂದ ಬಡ ರೋಗಿಗಳಿಗೆ ಸಕಾಲದಲ್ಲಿ ಚಿಕಿತ್ಸೆ ದೊರೆಯದೆ ತುಂಬಾ ತೊಂದರೆಗೀಡಾಗಿರುತ್ತಾರೆ. ಈ ಹಿಂದೆ ಆಸ್ಪತ್ರೆಗೆ ಮೈಸೂರು, ಹಾಸನ, ಕೊಡಗು, ತುಮಕೂರು ಜಿಲ್ಲೆಗಳಿಂದಲೂ ರೋಗಿಗಳು ಪ್ರತಿನಿತ್ಯ ಒಳ ಮತ್ತು ಹೊರ ರೋಗಿಗಳಾಗಿ 35-40 ರೋಗಿಗಳು ಚಿಕಿತ್ಸೆ ಪಡೆದುಕೊಂಡಿರುತ್ತಾರೆ. ಅತ್ಯಾಧುನಿಕ ಕೋಬಾಲ್ಟ್ ರೇಡಿಯೋ ಥೆರಪಿ ಯಂತ್ರ ಹಾಗೂ ಬ್ರಾಕಿಥೆರಪಿ ಯಂತ್ರಗಳಿದ್ದರೂ ಅವುಗಳನ್ನು ಉಪಯೋಗಿಸುವ ವಿಕಿರಣ ತಜ್ಞ ವೈದ್ಯ, ವಿಕಿರಣ ಸಂರಕ್ಷಣಾಧಿಕಾರಿ(ಆರ್.ಎಸ್.ಒ) ಇಲ್ಲದೇ ಯಂತ್ರಗಳು ಬಳಕೆಯಾಗುತ್ತಿಲ್ಲ. 2014 ರಲ್ಲಿ ಶೇ.60% ಭಾಗದ ಕೇಂದ್ರ ಸರ್ಕಾರದಿಂದ ರೂ.45-00 ಕೋಟಿ ಹಣ ಬಿಡುಗಡೆಯಾಗಿದ್ದು, ರಾಜ್ಯ ಸರ್ಕಾರದ ಶೇ.40% ಹಣ ಬಿಡುಗಡೆಯಾಗಬೇಕಾಗಿದೆ. ಸರ್ಕಾರದ ಇಚ್ಛಾಶಕ್ತಿಯ ಕೊರತೆಯಿಂದಾಗಿ ಕಟ್ಟಡ ನಿರ್ಮಾಣ ಕಾಮಗಾರಿ ನಿಧಾನಗತಿಯಲ್ಲಿ ಸಾಗುತ್ತಿದೆ. ಇದರಿಂದಾಗಿ ಕ್ಯಾನ್ಸರ್ ರೋಗಿಗಳು ಪ್ರತಿನಿತ್ಯ ದೂರದ ಬೆಂಗಳೂರು ಹಾಗೂ ಮೈಸೂರಿಗೆ ತೆರಳಿ ಚಿಕಿತ್ಸೆ ಪಡೆಯಬೇಕಾದ ದುಃಸ್ಥಿತಿ ನಿರ್ಮಾಣವಾಗಿದೆ. ಕ್ಯಾನ್ಸರ್ ರೋಗಕ್ಕೆ ಚಿಕಿತ್ಸೆ ಪಡೆಯಲು ಖಾಸಗಿ ಆಸ್ಪತ್ರೆಗಳಲ್ಲಿ ಹೆಚ್ಚಿನ ಮೊತ್ತ ಭರಿಸಬೇಕಾಗಿದ್ದು, ಬಡ ರೋಗಿಗಳಿಗೆ ಚಿಕಿತ್ಸೆ ದೊರೆಯುವುದು ದುಸ್ತರವಾಗಿ, ಜೀವನ ಮರಣದ ನಡುವೆ ಹೋರಾಡುವ ಚಿಂತಾಜನಕ ಸ್ಥಿತಿ ನಿರ್ಮಾಣವಾಗಿದೆ. ಮೊದಲೆ ಕ್ಯಾನ್ಸರ್ ಖಾಯಿಲೆಯಿಂದ ಬಳಲುತ್ತಿರುವ ಇವರಿಗೆ ಸಕಾಲದಲ್ಲಿ ಸೂಕ್ತ ಚಿಕಿತ್ಸೆ ದೊರೆಯದೆ ಜರ್ಝರಿತರಾಗಿದ್ದಾರೆ. ಈ ಸಂಬಂಧ ಪತ್ರಿಕೆಗಳಲ್ಲಿ ವರದಿಯಾಗಿದ್ದು, ಹಲವಾರು ಬಾರಿ ಸದನದಲ್ಲಿ ಪ್ರಸ್ತಾಪವಾಗಿದ್ದರೂ ಸರ್ಕಾರವು ಜಾಣ ಕಿವುಡನ್ನು ಪ್ರದರ್ಶಿಸುತ್ತಿರುವುದು ಶೋಚನೀಯ.

ಆದಕಾರಣ, ಸದರಿ ವಿಷಯವನ್ನು ಮಾನವೀಯ ಹಿನ್ನೆಲೆಯಲ್ಲಿ ಅತಿ ಗಂಭೀರವಾಗಿ ಪರಿಗಣಿಸಿ, ವಿಕಿರಣ ತಜ್ಞರು (ರೇಡಿಯೋಥೆರಪಿಸ್ಟ್) ಹಾಗೂ ವಿಕಿರಣ ಸಂರಕ್ಷಣಾಧಿಕಾರಿ (ಆರ್.ಎಸ್.ಒ) ಹುದ್ದೆಯನ್ನು ತುರ್ತಾಗಿ ಭರ್ತಿ / ನಿಯೋಜನೆ ಮಾಡಿ, ಬಾಕಿ ಉಳಿದಿರುವ ಕಟ್ಟಡ ಕಾಮಗಾರಿಯನ್ನು ತುರ್ತಾಗಿ ನಿರ್ವಹಿಸಿ, ಬಡ ಕ್ಯಾನ್ಸರ್ ರೋಗಿಗಳಿಗೆ ಸೂಕ್ತ ಚಿಕಿತ್ಸೆ ದೊರೆಯುವಂತೆ ಮಾಡುವ ಬಗ್ಗೆ.

******

**ಉತ್ತರ:-** ಕಿದ್ವಾಯಿ ಸ್ಮಾರಕ ಗಂಥಿ ಸಂಸ್ಥೆಯ ಮೇಲ್ವಿಚಾರಣೆಯೊಂದಿಗೆ ಮಂಡ್ಯ ಜಿಲ್ಲಾ ಆಸ್ಪತ್ರೆಯ ಆವರಣದಲ್ಲಿ ಕಾರ್ಯ ನಿರ್ವಹಿಸುತ್ತಿದ್ದ Teritiary cancer ಕೇಂದ್ರವನ್ನು 2007 ರಲ್ಲಿ ಮಂಡ್ಯ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಗೆ ವರ್ಗಾಯಿಸಿದ್ದು, ಕಿದ್ವಾಯಿ ಸ್ಮಾರಕ ಗಂಥಿ ಸಂಸ್ಥೆಯ ಅಡಿಯಲ್ಲಿ ಕಾರ್ಯನಿರ್ವಹಿಸುತ್ತಿದ್ದ ಸಿಬ್ಬಂದಿಗಳನ್ನು ಮಂಡ್ಯ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಗೆ ವಿಲೀನಗೊಳಿಸಲಾಗಿದೆ

ಕೇಂದ್ರ ಸರ್ಕಾರದ ಸಹಯೋಗದೊಂದಿಗೆ National Programme for Prevention and Control of Cancer, Diabetes, Cardiovasculaor Diseases and Stroke (NPCDCS) ಯೋಜನೆಯಡಿ ಮಂಡ್ಯ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ ಆವರಣದಲ್ಲಿರುವ ಹಳೆಯದಾದ ಪೆರಿಫೆರಲ್ ಕ್ಯಾನ್ಸರ್ ಕೇಂದ್ರವನ್ನು ರೂ.4500.00 ಲಕ್ಷಗಳ ಅನಾವರ್ತಕ ವೆಚ್ಚ ಹಾಗೂ ರೂ.1118.00 ಲಕ್ಷಗಳ ಆವರ್ತಕ ವೆಚ್ಚಗಳನ್ನೊಳಗೊಂಡಂತೆ ಒಟ್ಟಾರೆ ಅಂದಾಜು ವೆಚ್ಚ ರೂ.5618.00 ಲಕ್ಷಗಳ ಮೊತ್ತದಲ್ಲಿ ಮೇಲ್ದರ್ಜೆಗೇರಿಸುವ ಪ್ರಸ್ತಾವನೆಗೆ ಮಂಜೂರಾತಿ ನೀಡಿ ಸರ್ಕಾರಿ ಆದೇಶ ಸಂಖ್ಯೆ:ಆಕುಕ 228 ಎಂಪಿಎಸ್ 2016, ದಿ:21.03.2017 ರಲ್ಲಿ ಈಗಾಗಲೇ ಆಡಳಿತಾತ್ಮಕ ಅನುಮೋದನೆ ನೀಡಲಾಗಿರುತ್ತದೆ. ಈ ಕಾಮಗಾರಿಗೆ ಇದುವರೆವಿಗೆ ಕೇಂದ್ರ ಮತ್ತು ರಾಜ್ಯದ ಪಾಲು ಸೇರಿ ಒಟ್ಟಾರೆ ರೂ.30.02 ಕೋಟಿಗಳ ಅನುದಾನವನ್ನು ಬಿಡುಗಡೆ ಮಾಡಲಾಗಿದ್ದು, ವಿವರಗಳನ್ನು ಈ ಕೆಳಕಂಡ ಕೋಷ್ಟಕದಲ್ಲಿ ತಿಳಿಸಲಾಗಿದೆ.

(ರೂ.ಕೋಟಿಗಳಲ್ಲಿ)

| ಕ್ರ.ಸ | ಈ ಕಾಮಗಾರಿಯ ಅನಾವರ್ತಕ ವೆಚ್ಚ | ಅನುದಾನ ಬಿಡುಗಡೆ ಮಾಡಿದ ದಿನಾಂಕ | ಕೇಂದ್ರದ ಪಾಲು (60%) | ರಾಜ್ಯದ ಪಾಲು (40%) | ಒಟ್ಟು ರೂ |
|---|---|---|---|---|---|
| 1 | 45.00 | 31.03.2017 | 17.25 | 11.51 | 28.76 |
| 2 | (ಸಿವಿಲ್ ಕಾಮಗಾರಿ& | 14.03.2018 | - | 1.25 | 1.25 |
| 3 | ಉಪಕರಣಗಳಿಗಾಗಿ) | 19.06.2018 | - | 0.01 | 0.01 |
| | ಒಟ್ಟು | | **17.25** | **12.77** | **30.02** |

ಈ ಕಾಮಗಾರಿಯ ಅನಾವರ್ತಕ ವೆಚ್ಚ (Non-recurring) ರೂ.4500.00 ಲಕ್ಷಗಳಾಗಿದ್ದು, ಸಿವಿಲ್ ಕಾಮಗಾರಿಗಾಗಿ ರೂ.1200.00 ಲಕ್ಷಗಳು ಹಾಗೂ ಉಪಕರಣಗಳಿಗಾಗಿ ರೂ.3300.00 ಲಕ್ಷಗಳನ್ನು ನಿಗದಿಪಡಿಸಲಾಗಿರುತ್ತದೆ. ಮಂಡ್ಯ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ ಆವರಣದಲ್ಲಿರುವ ಟರ್ಷಿಯರಿ ಕ್ಯಾನ್ಸರ್ ಕೇರ್ ಸೆಂಟರ್ ಕೇಂದ್ರವನ್ನು ಮೇಲ್ದರ್ಜೆಗೇರಿಸುವ ಸಂಬಂಧದ ಸಿವಿಲ್ ಕಾಮಗಾರಿಗಾಗಿ ನಿಗದಿಪಡಿಸಲಾಗಿದ್ದ ಅನುದಾನವನ್ನು ಬಿಡುಗಡೆಗೊಳಿಸಲಾಗಿದ್ದು, ಸದರಿ ಅನುದಾನವನ್ನು ಸಂಪೂರ್ಣವಾಗಿ ಬಳಸಿಕೊಳ್ಳಲಾಗಿರುತ್ತದೆ ಹಾಗೂ ಸಿವಿಲ್ ಕಾಮಗಾರಿಯು ಶೇಕಡ 90 ರಷ್ಟು ಭಾಗ ಪೂರ್ಣಗೊಂಡಿರುತ್ತದೆ.

ಆಸ್ಪತ್ರೆಯಲ್ಲಿ ಪ್ರಸ್ತುತ ಇರುವ ಟೆಲಿಕೋಬಾಲ್ಟ್ ಯಂತ್ರವನ್ನು ಉಪಯೋಗಿಸಲು ಅನುವಾಗುವಂತೆ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಿಂದ ವೈದ್ಯರನ್ನು ನಿಯೋಜನೆ ಮೇಲೆ ನೇಮಿಸಲು ಕ್ರಮ ವಹಿಸಲಾಗುತ್ತಿದೆ.

ಮಂಡ್ಯ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ ಅಧೀನದಲ್ಲಿನ ಪೆರಿಫೆರಲ್ ಕ್ಯಾನ್ಸರ್ ಕೇರ್ ಕೇಂದ್ರಕ್ಕೆ ಬರುವ ರೋಗಿಗಳ ಚಿಕಿತ್ಸೆಯ ದೃಷ್ಟಿಯಿಂದ, ಬೆಂಗಳೂರು ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಸಂಸ್ಥೆಯ ರೇಡಿಯೇಷನ್ ಸೇಫ್ಟಿ ಆಫೀಸರ್ ರವರನ್ನು ನಿಯೋಜನೆ ಮೇಲೆ ಮಂಡ್ಯ ಕ್ಯಾನ್ಸರ್ ಸಂಸ್ಥೆಗೆ ನೇಮಿಸಲಾಗಿದೆ.

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಿಂದ ಸರ್ಜಿಕಲ್ ಆಂಕಾಲಜಿಸ್ಟ್ ರವರು ನಿಯೋಜನೆ ಮೇರೆಗೆ ಕರ್ತವ್ಯ ನಿರ್ವಹಿಸುತ್ತಿದ್ದಾರೆ.

ವೈದ್ಯಾಧಿಕಾರಿಗಳು ಮತ್ತು ಇತರೆ ಹುದ್ದೆಗಳ ನೇಮಕಾತಿ ಬಗ್ಗೆ ಸಂಸ್ಥೆಯ ಆಡಳಿತ ಪರಿಷತ್ ಸಭೆಯಲ್ಲಿ ನಿರ್ಣಯಿಸಿದಂತೆ ಕಿದ್ವಾಯಿ ಸ್ಮಾರಕ ಗಂಥಿ ಸಂಸ್ಥೆಯವರಿಗೆ Teritiary care cancer ಕೇಂದ್ರಕ್ಕೆ ಅಗತ್ಯವಾದ ವೈದ್ಯರು ಮತ್ತು ಇತರೆ ಸಿಬ್ಬಂದಿಗಳ ವಿವರವನ್ನು ನೀಡಲು ಕೋರಲಾಗಿದ್ದು, ಸದರಿಯವರು ನೀಡುವ ವರದಿಯಂತೆ ವೈದ್ಯರು ಮತ್ತು ಇತರೆ ಸಿಬ್ಬಂದಿಗಳ ನೇಮಕಾತಿಗೆ ಕ್ರಮವಹಿಸಲಾಗಿದೆ.

ಯಂತ್ರೋಪಕರಣಗಳನ್ನು ಖರೀದಿಸುವ ಸಂಬಂಧ ಈಗಾಗಲೇ 3 ಬಾರಿ ಟೆಂಡರ್‌ಗಳನ್ನು ಕರೆಯಲಾಗಿದ್ದು, ಮೊದಲನೇ ಬಾರಿಗೆ ಕರೆಯಲಾದ ಟೆಂಡರ್‌ನಲ್ಲಿ ಯಾವೊಂದು ಸಂಸ್ಥೆಗಳೂ ಸಹ ಭಾಗವಹಿಸಿರುವುದಿಲ್ಲ. ಎರಡನೇ ಬಾರಿಗೆ ಕರೆಯಲಾದ ಟೆಂಡರ್ ಸಿಂಗಲ್ ಬಿಡ್ ಟೆಂಡರ್ ಆಗಿರುತ್ತದೆ. ಮೂರನೇ ಬಾರಿಗೆ ಕರೆಯಲಾದ ಟೆಂಡರ್ ಪ್ರಕ್ರಿಯೆಯಲ್ಲಿ ಕೇಂದ್ರ ಸರ್ಕಾರವು ಉಪಕರಣಕ್ಕೆ ನಿಗದಿಪಡಿಸಲಾಗಿರುವ Ceiling Price ಗಿಂತ ಅಧಿಕವಾಗಿ ದರ ಸ್ವೀಕೃತವಾದುದರಿಂದ ನಿಯಮಾನುಸಾರ ಬಿಡ್‌ನ್ನು ತಿರಸ್ಕರಿಸಲಾಗಿರುತ್ತದೆ.

ಆದಾಗ್ಯೂ, ಮಂಡ್ಯ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯಲ್ಲಿ ಹಾಲಿ ಶಸ್ತ್ರಚಿಕಿತ್ಸೆ ಅಗತ್ಯವಿರುವ ಕ್ಯಾನ್ಸರ್ ರೋಗಿಗಳಿಗೆ ಶಸ್ತ್ರಚಿಕಿತ್ಸೆ ಹಾಗೂ ಕಿಮೋಥೆರಪಿ ಸೌಲಭ್ಯವನ್ನು ನೀಡಲಾಗುತ್ತಿದೆ.

ಮುಂದುವರೆದು, ಕೇಂದ್ರ ಸರ್ಕಾರದ ಸಹಯೋಗದೊಂದಿಗೆ ಮಂಡ್ಯ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ ಆವರಣದಲ್ಲಿರುವ ಟರ್ಷಿಯರಿ ಕ್ಯಾನ್ಸರ್ ಕೇರ್ ಕೇಂದ್ರವನ್ನು ಮೇಲ್ದರ್ಜೆಗೇರಿಸುವ ಸಿವಿಲ್ ಕಾಮಗಾರಿಯ ಮೂಲ ಅಂದಾಜು ಮೊತ್ತವು ರೂ.1175.00 ಲಕ್ಷಗಳಿಂದ ರೂ.1740.00 ಲಕ್ಷಗಳಿಗೆ ಪರಿಷ್ಕೃತಗೊಂಡಿದ್ದು, ಈ ಪರಿಷ್ಕೃತ ಅಂದಾಜು ಮೊತ್ತಕ್ಕೆ ಆಡಳಿತಾತ್ಮಕ ಅನುಮೋದನೆ ನೀಡುವಂತೆ ಕೋರಿ ನಿರ್ದೇಶಕರು, ಮಂಡ್ಯ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ ಇವರಿಂದ ಪ್ರಸ್ತಾವನೆ ಸಲ್ಲಿಸಲಾಗಿದ್ದು, ಸದರಿ ಪ್ರಸ್ತಾವನೆಯು ಸರ್ಕಾರದ ಪರಿಶೀಲನೆಯಲ್ಲಿರುತ್ತದೆ.

ಸಂಖ್ಯೆ: ಎಂಇಡಿ 117 ಎಂಪಿಎಸ್ 2023

(ಡಾ: ಕೆ. ಸುಧಾಕರ್)
ಆರೋಗ್ಯ ಮತ್ತು ಕುಟುಂಬ ಕಲ್ಯಾಣ
ಹಾಗೂ ವೈದ್ಯಕೀಯ ಶಿಕ್ಷಣ ಸಚಿವರು



Generated from eOffice by DR K SUDHAKAR, MED MIN(SK), MINISTER, MEDICAL EDUCATION SEC on 27/02/2023 06:27 AM